# ಪೊಲೀಸ್ ಇಲಾಖೆಗೆ ಸ್ಯಾನಿಟೈಸರ್ ಸ್ಪ್ರೇಯರ್ ವಿತರಣೆ

**ಚಿತ್ರದುರ್ಗ - ಏ. 19 -** ***ಮಾನವರಿಂದ ಮಾನವರಿಗೆ ಸೋಂಕು ಹರಡುತ್ತಿದ್ದು, ಮಾನವನ ಪ್ರಾಣ ಮಾನವನೇ ಉಳಿಸಬೇಕಾದ ತುರ್ತುಸಂದರ್ಭ ಬಂದೊದಗಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.***

ಇಂದು ಮುರುಘರಾಜೇಂದ್ರ ಮಠದಲ್ಲಿ ಪೊಲೀಸ್ ಇಲಾಖೆಯವರಿಗೆ ಸ್ಯಾನಿಟೈಸರ್ ಸ್ಪ್ರೇಯರ್‌ಗಳನ್ನು ವಿತರಿಸಿ ಮಾತನಾಡಿದ ಶ್ರೀಗಳು, ಜಗತ್ತು ಸಂಕಟ ಅನುಭವಿಸುತ್ತಿದೆ. ಮಾನವ ತನ್ನ ಪ್ರಾಣವನ್ನು ತಾನೇ ಕಾಪಾಡಿಕೊಳ್ಳಬೇಕಿದೆ. ಕೊರೊನಾ ಎಂಬ ಭೀಕರ ಸೋಂಕಿನ ವಿರುದ್ಧ ಆರೋಗ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆ ತಮ್ಮ ಪ್ರಾಣದ ಹಂಗನ್ನು ತೊರೆದು ಹೋರಾಡುತ್ತಿವೆ. ಜನರ ಸೇವೆ ಮಾಡುವುದು, ಅವರ ಜೀವ ಉಳಿಸುವುದು ಅವರಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಹಾಗೆಯೇ ನಾವು ಸಹ ಅವರನ್ನು ಗೌರವದಿಂದ ಕಾಣಬೇಕಿದೆ. ಅವರ ಆರೋಗ್ಯವು ಅಷ್ಟೇ ಮುಖ್ಯ. ಆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿರುವ ಎಲ್ಲ ಪೊಲೀಸ್ ಇಲಾಖೆಗಳಿಗೆ ಒಂದೊಂದು ಸ್ಯಾನಿಟೈಸರ್ ಸ್ಪ್ರೇಯರ್ ಯಂತ್ರವನ್ನು ಶ್ರೀಮಠದಿಂದ ಕೊಡಲಾಗುತ್ತಿದೆ. ಇಲಾಖೆಯವರು ಸಹ ಅವರ ವಾಹನಗಳಿಗೆ, ಕಛೇರಿಗಳಿಗೆ ಸ್ಯಾನಿಟೈಸರ್ ಸಿಂಪಡಿಸಿ ಅವರ ಆರೋಗ್ಯವನ್ನು ಕಾಪಾಡಿಕೊಳ್ಳಲಿ ಎಂಬುದು ನಮ್ಮ ಆಶಯ ಎಂದು ಹೇಳಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ರಾಧಿಕಾ ಮಾತನಾಡಿ, ಸಾರ್ವಜನಿಕರ ಯೋಗಕ್ಷೇಮದ ಜವಾಬ್ದಾರಿ ನಮ್ಮದು. ಅವರ ಆರೋಗ್ಯದ ಕಡೆ ನಾವು ಗಮನಹರಿಸಬೇಕಿದೆ. ಜೊತೆಗೆ ನಮ್ಮ ಆರೋಗ್ಯವನ್ನು ರಕ್ಷಣೆ ಮಾಡಿಕೊಳ್ಳಬೇಕಿದೆ. ನಮ್ಮ ಇಲಾಖೆಗೆ ಶ್ರೀಗಳು ಸ್ಯಾನಿಟೈಸರ್ ಸ್ಪ್ರೇಯರ್‌ಗಳನ್ನು ವಿತರಿಸಿರುವುದು ನಮ್ಮ ಆರೋಗ್ಯದ ಬಗ್ಗೆ ಅವರಿಗಿರುವ ಕಾಳಜಿ ದೊಡ್ಡದು ಎಂಬುದನ್ನು ತೋರಿಸುತ್ತದೆ. ಅವರ ಕಾಳಜಿಗೆ ಇಲಾಖೆಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು. ಸ್ಯಾನಿಟೈಸರ್ ಸ್ಪ್ರೇಯರ್‌ನ ಪ್ರಾತ್ಯಕ್ಷಿಕೆಯನ್ನು ಪೊಲೀಸ್ ಇಲಾಖೆ ವಾಹನಕ್ಕೆ ಸಿಂಪಡಿಸುವುದರ ಮೂಲಕ ತೋರಿಸಲಾಯಿತು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನಂದಗಾವಿ, ಚಿತ್ರದುರ್ಗ ಉಪವಿಭಾಗದ ಉಪಪೊಲೀಸ್ ವರಿಷ್ಠಾಧಿಕಾರಿ ಪಾಂಡುರಂಗಪ್ಪ, ಜಿಲ್ಲಾ ಮೀಸಲು ಪಡೆ ಉಪಪೊಲೀಸ್ ವರಿಷ್ಠಾಧಿಕಾರಿ ತಿಪ್ಪೇಸ್ವಾಮಿ, ವೃತ್ತ ನಿರೀಕ್ಷಕರಾದ ಗಿರೀಶ್, ನಹೀಂ, ಪ್ರಕಾಶ್, ಸೋಮಶೇಖರ್ ಹಾಗೂ ಉಪಪೊಲೀಸ್ ಅಧಿಕಾರಿಗಳು, ಇಲಾಖೆಯ ಇತರೆ ಸಿಬ್ಬಂದಿವರ್ಗದವರು, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಮುಖ್ಯಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಮಲ್ಲಿಕಾರ್ಜುನಯ್ಯ, ನಗರಸಭಾ ಸದಸ್ಯ ಸುರೇಶ್, ಬಿಜೆಪಿ ಕಲ್ಲೇಶಯ್ಯ ಮೊದಲಾದವರು ಇದ್ದರು.




AGRICULTURAL SPRAYER


POLICE
KA-16-G-579